1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂ: 1146 /2019 ನ್ಯಾಯಾಲಯದ ಸಾಕ್ಷಿ

ದಿನಾಂಕಃ 10-03-2026 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಗಣೇಶ ಕಣಗಿ |
| ತಂದೆ ಹೆಸರು | ಲುಂಬಣ್ಣ |
| ವಯಸ್ಸು | 44 ವರ್ಷ, |
| ಉದ್ಯೋಗ | ಎಚ್ ಸಿ ಕೊಪ್ಪಳ ಗ್ರಾಮೀಣ ಠಾಣೆ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನಾನು ಕೊಪ್ಪಳ ಗ್ರಾಮೀಣ ಪೊಲೀಸ ಠಾಣೆಯಲ್ಲಿ 2017 ರಿಂದ 2019 ಆಗಸ್ಟ ವರೆಗೆ ಕೆಲಸ ಮಾಡಿರುತೆತೇನೆ. ಮೃತ ಚಾಸಾ-10 ರವರೊಂದಿಗೆ ನಾನು 2017 ರಿಂದ 2019 ರವರೆಗೆ ಕೆಲಸ ಮಾಡಿರುತ್ತೇನೆ. ಚಾಸಾ-10 ರವರ ಸಹಿ ಮತ್ತು ಬರವಣಿಗೆಳನ್ನು ನಾನು ಗುರುತಿಸಬಲ್ಲೆ. ನಿಪಿ-1 ರಿಂದ 7 ರಲ್ಲಿರುವ ತನಿಖಾಧಿಕಾರಿ ಸಹಿಗಳು ಚಾಸಾ-10 ರವರ ಸಹಿಗಳರಾಗಿರುತ್ತವೆ. ಸದರಿ ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-1(ಬಿ), 1(ಸಿ), 2(ಸಿ), 3(ಬಿ), 4(ಎ), 5(ಬಿ), 6(ಎ) ಮತು ನಿಪಿ-7(ಎ) ಎಂದು ಗುರುತಿಸಲಾಯಿತು. ಚಾಸಾ-10 ರವರು ಈ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ಸದರಿಯವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪ್ರ.ವ.ವರದಿಯನ್ನು ನಿಪಿ-8 ಎಂದು, ಚಾಸಾ-10 ರವರ ಸಹಿ ನಿಪಿ-8(ಎ) ಎಂದು ಗುರುತಿಸಲಾಯಿತು. ಆರೋಪಿ ಸರ್ಕಾರಿಕೆಲಸದಲ್ಲಿದ್ದ ಕಾರಣಕ್ಕೆ ಎಸ್ ಪಿ ಕಚರೇರಿಯಿಂದ ವಿಚಾರಣೆಗೆ ಪರವಾನಿಗೆ ಪಡೆದಿದ್ದು ಸದರಿ ಪರವಾನಿಗೆಗೆ ಮನವಿ ಪತ್ರವನ್ನು ಸಲ್ಲಿಸಿದ್ದು ಮತ್ತು ಅದರಲ್ಲಿನ ಚಾಸಾ10 ರವರ ಸಹಿ ನೋಡಿಗುರುತಿಸಿದ್ದು ಸದರಿ ಮನವಿಯನ್ನು ನಿಪಿ-9 ಎಂದು,ಚಾಸಾ-10 ರವರ ಸಹಿ ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-9 ಕ್ಕೆ ಎಸ್ ಪಿ ಕಚೆರಿಯವರು ಆದೇಶ ಮಾಡಿದ್ದು ಸದರಿ ಆದೇಶದ ಪ್ರತಿಯನ್ನು ನಿಪಿ-10 ಎಂದು, ಚಾಸಾ10 ರವರ ಸಹಿ ನಿಪಿ-10(ಎ) ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿರುತ್ತೇನೆ. ಅವರು ನಮ್ಮ ಇಲಾಖೆಯ ಸಿಬ್ಬಂದಿಯಾಗಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ. ಈ ಪ್ರಕರಣದ ಎಂ ಎಲ್ ಸಿ ಬಂದಾಗ ನಾನು ಕಂಪ್ಯೂಟರ ಆಪರೇಟರ ಆಗಿ ಕೆಲಸ ಮಾಡುತ್ತಿದ್ದೆ. ದಿಃ 14-5-2019 ರಂದು ಅಂದಾಜು ರಾತ್ರಿ 7 ರಿಂದ 8 ರ ಸಮಯದಲ್ಲಿ ಎಂ ಎಲ್ ಸಿ ಕರೆ ಠಾಣೆಗೆ ಬಂದಿತ್ತು. ನನಗೆ ಈ ಈ ಪ್ರಕರಣದ ಬಗ್ಗೆ ಯಾವುದೇಲ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-10 ರವರ ನನ್ನ ಮೇಲಾಧಿಕಾರಿಯಾಗಿದ್ದು ಆ ಕಾರಣಕ್ಕೆ ಸುಳ್ಳು ಸಾಕ್ಷ ಹೇಳುತ್ತಿದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.**